ವಿಷಯ:- ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 232 (427)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಪ್ರತಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ ಸಂಚರಿಸಲು ಸರ್ಕಾರವು ಹಾಕಿಕೊಂಡಿರುವ ಕಾರ್ಯಕ್ರಮಗಳಾವುವು?

ಆ) ಗುಂಡ್ಲುಪೇಟೆ ತಾಲ್ಲೂಕಿಗೆ ಗ್ರಾಮಾಂತರ ಪ್ರದೇಶದಲ್ಲಿ ಬಸ್ ಸಂಚರಿಸಲು ಎಷ್ಟು ಬಸ್ಸುಗಳನ್ನು ಒದಗಿಸಲಾಗಿದೆ?

ಇ) ಗುಂಡ್ಲುಪೇಟೆ ಬಸ್ ಡಿಪೋ ಮುಖಾಂತರ ಸಂಚರಿಸುತ್ತಿರುವ ಮಾರ್ಗಗಳೆಷ್ಟು?

ಈ) ಈ ಬಸ್ ಡಿಪೋ ಲಾಭದಾಯಕವಾಗಿದೆಯೇ?

ಉ) ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಪಿ.ಜಿ.ಆರ್.ಸಿಂದ್ಯಾ (ಸಾರಿಗೆ ಸಚಿವರು):-

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸ್ತುತ 3561 ಅನುಸೂಚಿಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಚರಣೆ ಮಾಡುತ್ತಿವೆ. ಅದರಲ್ಲಿ 224 ಅನುಸೂಚಿಗಳು ತಾಲ್ಲೂಕು ಮತ್ತು ಜಿಲ್ಲೆ ಕೇಂದ್ರಗಳ ಸುತ್ತಲೂ 20ರಿಂದ 30ಕಿ.ಮಿ. ವ್ಯಾಪ್ತಿಯಲ್ಲಿ ಆಚರಣೆ ಮಾಡಲಾಗುತ್ತಿವೆ.

ಆ) ಗುಂಡ್ಲುಪೇಟೆ ತಾಲ್ಲೂಕಿನ ರಾಷ್ಟ್ರೀಕೃತವಾಗಿರುವ ವಲಯದಲ್ಲಿ 36 ಬಸ್ಸುಗಳನ್ನು ಹಾಗೂ ರಾಷ್ಟ್ರೀಕೃತವಲ್ಲದ ವಲಯದಲ್ಲಿ 15 ಬಸ್ಸುಗಳನ್ನು ಕಾಯಾಚರಣೆ ಮಾಡುತ್ತಿದೆ.

ಇ) 69 ಮಾರ್ಗಗಳು (466 ಸುತ್ತುವಳಿಗಳು) ಗುಂಡ್ಲುಪೇಟೆ ಡಿಪೋದಿಂದ ಆಚರಣೆ ಮಾಡಲಾಗುತ್ತಿದೆ.

ಈ) ಇಲ್ಲ.

ಉ) ಜಿಲ್ಲಾಧಿಕಾರಿ, ಮೈಸೂರುರವರನ್ನು ಸರ್ವೆ ಸಂಖ್ಯೆ:93ರಲ್ಲಿನ 1 ಎಕರೆ ಜಮೀನನ್ನು ಒದಗಿಸಲು ಕೋರಲಾಗಿದೆ.

ವಿಷಯ:- ಕರ್ನಾಟಕ ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳು ಹಾಗೂ ಕಾರ್ಯಕರ್ತೆಯರ ವೇತನ ಹೆಚ್ಚಳ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 233 (600)

ಶ್ರೀ ಮಂಜುನಾಥ ಸಿ.ಕುನ್ನೂರ್ (ಶಿಗ್ಗಾಂವ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳೆಷ್ಟು?

ಆ) ಕರ್ನಾಟಕ ರಾಜ್ಯದ ಯಾವ ಯಾವ ತಾಲ್ಲೂಕುಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕಾಗಿರುವುದು ಅವುಗಳನ್ನು ತೆರೆಯುವಲ್ಲಿ ವಿಳಂಬವಾಗಿರಲು ಕಾರಣಗಳೇನು?

ಇ) ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತಿ ತಿಂಗಳು ನೀಡಲಾಗುತ್ತಿರುವ ವೇತನವೆಷ್ಟು? ಇದರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು?

ಈ) ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀಮತಿ ಏಮುಲಬಾಯಿ ಜಗದೇವ್‌ರಾವ್ ಬೇಳಮುಖ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 39,985 ಅಂಗನವಾಡಿ ಕೇಂದ್ರಗಳು ಮಂಜೂರಾಗಿದೆ.

ಆ) ಕರ್ನಾಟಕ ರಾಜ್ಯದ ಯಾವುದೇ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಬಾಕಿ ಇರುವುದಿಲ್ಲ. ಹಾಲಿ ಕರ್ನಾಟಕ ರಾಜ್ಯದ ಎಲ್ಲಾ 175 ತಾಲ್ಲೂಕುಗಳಲ್ಲಿಯೂ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗಿದೆ.

ಇ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ರೀತ್ಯಾ ಅಂಗನವಾಡಿ ಕಾರ್ಯಕರ್ತೆಯರಿಗೆ ಈ ಕೆಳಕಂಡಂತೆ ಗೌರವಧನ ನೀಡಲಾಗುತ್ತಿದೆ.

		(ಮಾಹೆಯಾನ) ರೂ.
1.	ಎಸ್‌ಎಸ್‌ಎಲ್‌ಸಿ ಪಾಸಾದ ಅಂಗನವಾಡಿ ಕಾರ್ಯಕರ್ತೆಯರಿಗೆ ..	400
2.	ಎಸ್‌ಎಸ್‌ಎಲ್‌ಸಿ ಪಾಸಾಗಿ 5 ವರ್ಷ ಸೇವೆ ಸಲ್ಲಿಸಿರುವವರಿಗೆ ..	425
3.	ಎಸ್‌ಎಸ್‌ಎಲ್‌ಸಿ ಪಾಸಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ ..	450
4.	ಎಸ್‌ಎಸ್‌ಎಲ್‌ಸಿ ಫೇಲಾದವರಿಗೆ .	350

5.	ಎಸ್‌ಎಸ್‌ಎಲ್‌ಸಿ ಫೇಲಾಗಿ 5 ವರ್ಷ ಸೇವೆ ಸಲ್ಲಿಸಿದವರಿಗೆ	..	375
6.	ಎಸ್‌ಎಸ್‌ಎಲ್‌ಸಿ ಫೇಲಾಗಿ 10 ವರ್ಷ ಸೇವೆ ಸಲ್ಲಿಸಿದವರಿಗೆ	..	400
	ಅಂಗನವಾಡಿ ಸಹಾಯಕಿಯರಿಗೆ	..	200

ಇದಲ್ಲದೇ ರಾಜ್ಯ ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹೆಯಾನ 100 ರೂ.ಗಳ ಹೆಚ್ಚುವರಿ ಸಂಭಾವನೆಯನ್ನು ದಿನಾಂಕ 1-11-95ರಿಂದ ತನ್ನ ನಿಧಿಯಿಂದ ನೀಡುತ್ತಿದೆ.

ರಾಜ್ಯದಲ್ಲಿ ಒಟ್ಟು 185 ಯೋಜನೆಗಳಿವೆ. ಈ ಪೈಕಿ 155 ಕೇಂದ್ರ ಯೋಜನೆಗಳು ರಾಜ್ಯ ವಲಯದ ಯೋಜನೆಗಳು. ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು ಕೇಂದ್ರ ಸರ್ಕಾರ ಭರಿಸುತ್ತಿದೆ.

ಇದು ಭಾರತದಾದ್ಯಂತ ಏಕರೂಪದ್ದಾಗಿದೆ. ರಾಜ್ಯ ವಲಯದ 30 ಯೋಜನೆಗಳ ಗೌರವಧನವಲ್ಲದೇ ಎಲ್ಲಾ 185 ಯೋಜನೆಗಳ ಅಂಗನವಾಡಿ ಕಾರ್ಯಕರ್ತೆಯರ ಹೆಚ್ಚುವರಿ ಸಂಭಾವನೆಯನ್ನು ರಾಜ್ಯ ಸರ್ಕಾರವೇ ಭರಿಸುತ್ತಿದೆ.

ಈ) ಈ ವಿಷಯವನ್ನು ಸರ್ಕಾರವು ಈಗಾಗಲೇ ಪರಿಶೀಲಿಸಿ ಕೇಂದ್ರ ಸರ್ಕಾರ ನೀಡುತ್ತಿರುವ ಗೌರವಧನದೊಂದಿಗೆ ರಾಜ್ಯ ಸರ್ಕಾರದ ವತಿಯಿಂದ ರೂ. 100 ಹಾಗೂ ರೂ. 50 ಅನ್ನು ಹೆಚ್ಚಿನ ಸಂಭಾವನೆಯನ್ನು ದಿನಾಂಕ 1-11-95ರಿಂದ ಹೆಚ್ಚಿಸಲಾಗಿದೆ.

ವಿಷಯ:- 94-95ರಿಂದ 96-97ರವರೆಗೆ ಆಶ್ರಯ ಯೋಜನೆಯಲ್ಲಿ ಕುಂದಾಪುರ ತಾಲ್ಲೂಕಿಗೆ ಮಂಜೂರು ಮಾಡಿದ ಮನೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 235 (298)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1994-95, 95-96, 96-97ನೇ ಸಾಲಿನಲ್ಲಿ ಆಶ್ರಯ ಯೋಜನೆಯಲ್ಲಿ ಕುಂದಾಪುರ ತಾಲ್ಲೂಕಿಗೆ ಮಂಜೂರು ಮಾಡಿದ ಮನೆಗಳೆಷ್ಟು?

ಆ) ಈ ಮನೆಗಳಲ್ಲಿ ಬಿಡುಗಡೆ ಹಣವೆಷ್ಟು? ಹಾಗೂ ಇನ್ನು ಬಿಡುಗಡೆ ಮಾಡಬೇಕಾದ ಹಣವೆಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-